## ಕೊಂಕಣಾ-ರಣವೀರ್ ದೂರ ದೂರ

ಐದು ವರ್ಷದ ಅಲ್ಪಾವಧಿಯ ದಾಂಪತ್ಯಕ್ಕೆ ಅಂತ್ಯಹಾಡಲು ನಟಿ ಕೊಂಕಣಾ ಸೇನ್ ಶರ್ಮಾ ಮತ್ತು ನಟ ರಣವೀರ್ ಶೋರಿ ನಿರ್ಧರಿಸಿದ್ದಾರೆ. ಇಬ್ಬರೂ ಕುಳಿತು ಚರ್ಚಿಸಿ ಪರಸ್ಪರ ಒಪ್ಪಿಗೆ ಪಡೆದ ಬಳಿಕವೇ ಈ ನಿರ್ಧಾರಕ್ಕೆ ಮುಂದಾಗಿದ್ದಾರೆ.

'ರಣವೀರ್ ಮತ್ತು ನಾನು ಪರಸ್ಪರ ಪ್ರತ್ಯೇಕವಾಗಲು ತೀರ್ಮಾನಿಸಿದ್ದೇವೆ. ಆದರೆ ಇಬ್ಬರ ಗೆಳೆತನ ಮುಂದುವರಿಯಲಿದೆ. ಮಗುವಿನ ಪಾಲನೆಯ ಹೊಣೆಯನ್ನು ಇಬ್ಬರೂ ವಹಿಸಿಕೊಳ್ಳಲಿದ್ದೇವೆ. ನಿಮ್ಮ ಬೆಂಬಲಕ್ಕೆ ಧನ್ಯವಾದ' ಎಂದು ಕೊಂಕಣಾ ಟ್ವಿಟರ್ ಮತ್ತು ಮೈಕ್ರೊ ಬ್ಲಾಗಿಂಗ್ ತಾಣದಲ್ಲಿ ಬರೆದುಕೊಂಡಿದ್ದಾಳೆ. ಇದೇ ಸಾಲುಗಳನ್ನೇ ತಮ್ಮ ಪೋಸ್ಟ್‌ನಲ್ಲಿಯೂ ಮೂಡಿಸಿದ್ದಾನೆ ರಣವೀರ್. ಈ ದಂಪತಿಗೆ ಹಾರೂನ್ ಎಂಬ ನಾಲ್ಕು ವರ್ಷದ ಮಗನಿದ್ದಾನೆ.

ಕೊಂಕಣಾ (35) ಮತ್ತು ರಣವೀರ್ (43) ದಾಂಪತ್ಯಕ್ಕೆ ತಿಲಾಂಜಲಿ ಇಡುತ್ತಾರೆ ಎಂಬ ಸುದ್ದಿ ಹಲವು ಕಾಲದಿಂದಲೂ ಹರಿದಾಡುತ್ತಿತ್ತು. ಈ ಕುರಿತ ಊಹಾಪೋಹಗಳಿಗೆ ಇಬ್ಬರೂ ಟ್ವಿಟರ್‌ನ ಪೋಸ್ಟ್ ಮೂಲಕ ತೆರೆ ಎಳೆದಿದ್ದಾರೆ. 'ಟ್ರಾಫಿಕ್ ಸಿಗ್ನಲ್', 'ಮಿಕ್ಸ್‌ಡ್ ಡಬಲ್ಸ್', 'ಆಜ ನಚ್ಲೆ' ಮತ್ತು ಗೌರ್ ಹರಿ ದಾಸ್ತನ್' ಚಿತ್ರಗಳಲ್ಲಿ ಈ ಜೋಡಿ ಒಟ್ಟಿಗೆ ನಟಿಸಿತ್ತು. 2007ರಲ್ಲಿ ಇಬ್ಬರೂ ಡೇಟಿಂಗ್ ಪ್ರಾರಂಭಿಸಿದ್ದರು. ಒಂದಷ್ಟು ಕಾಲ ತಮ್ಮ ಪ್ರೇಮವನ್ನು ಅಲ್ಲಗಳೆದರೂ ಕೊನೆಗೆ 2010ರಲ್ಲಿ ಗುಟ್ಟಾಗಿ ಹಸೆಮಣೆ ಏರಿತ್ತು ಈ ಜೋಡಿ.





## ಹೃತಿಕ್ ಗೆಳೆಯನ ಜೊತೆ ಸೂಸೇನ್ ಮದುವೆ?

ಹೃತಿಕ್ ರೋಷನ್ ಮತ್ತು ಸೂಸೇನ್ ಖಾನ್ ತಮ್ಮ 14 ವರ್ಷದ ಸುದೀರ್ಘ ಬಾಂಧವ್ಯ ತ್ಯಜಿಸಿ ಒಂದು ವರ್ಷ ಕಳೆದಿದೆ. ಆಗೊಮ್ಮೆ ಈಗೊಮ್ಮೆ ಇಬ್ಬರ ಮದುವೆ ಸುದ್ದಿಗಳು ಕೇಳಿಬಂದರೂ ಯಾವುದೂ ಸತ್ಯವಾಗಿಲ್ಲ. ಆದರೆ ಬಿಟೌನ್ ನಲ್ಲಿ ಇತ್ತೀಚೆಗೆ ಹರಿದಾಡುತ್ತಿರುವ ವರ್ತಮಾನದ ಪ್ರಕಾರ ಸೂಸೇನ್ ಮತ್ತೆ ಸಾಂಸಾರಿಕ ಬದುಕಿಗೆ ಕಾಲಿಡಲು ಸಿದ್ಧತೆ ನಡೆಸಿದ್ದಾಳೆ. ಅದೂ ತನ್ನ ಮಾಜಿ ಪತಿ ಹೃತಿಕ್‌ನ ಆಪ್ತ ಸ್ನೇಹಿತನ ಜೊತೆ ಎನ್ನುವುದು ಮತ್ತೊಂದು ವದಂತಿ. ಈ ಗಾಳಿ ಸುದ್ದಿಗಳನ್ನು ನಂಬುವುದಾದರೆ, ಹೃತಿಕ್ ಮತ್ತು ಸೂಸೇನ್ ದಾಂಪತ್ಯ ಮುರಿದು ಬೀಳಲು ಈ ಸ್ನೇಹಿತನೇ ಕಾರಣ.

2000ದ ಡಿಸೆಂಬರ್‌ನಲ್ಲಿ ಹೃತಿಕ್ ಮತ್ತು ಸೂಸೇನ್ ವಿವಾಹ ಬಂಧಕ್ಕೊಳಗಾಗಿದ್ದರು. 2013ರ ಡಿಸೆಂಬರ್‌ನಲ್ಲಿ ಇಬ್ಬರೂ ದೂರಾಗಿದ್ದರು. ಬಳಿಕ 2014ರ ಮೇನಲ್ಲಿ ಪರಸ್ಪರ ಒಪ್ಪಿಗೆ ಮೇಲೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. 2014ರ ಡಿಸೆಂಬರ್‌ನಲ್ಲಿ ವಿಚ್ಛೇದನಕ್ಕೆ ಕೌಟುಂಬಿಕ ನ್ಯಾಯಾಲಯ ಅನುಮತಿ ನೀಡಿತ್ತು.

ಹೀಗೆ ದಾಂಪತ್ಯ ಅಂತ್ಯಗೊಂಡ ಬೆನ್ನಲ್ಲೇ ಸೂಸೇನ್, 'ರಾಕ್ ಆನ್' ಖ್ಯಾತಿಯ ನಟ ಅರ್ಜುನ್ ರಾಮ್‌ಪಾಲ್‌ನನ್ನು ಮದುವೆಯಾಗಲಿದ್ದಾಳೆ ಎಂಬ ವದಂತಿ ಹಬ್ಬಿತ್ತು. ಅರ್ಜುನ್ ಜತೆಗಿನ ಆತ್ಮೀಯತೆಯಿಂದಾಗಿಯೇ ಈ ದೀರ್ಘಕಾಲದ ಸಂಸಾರದಲ್ಲಿ ಬಿರುಕು ಮೂಡಿದ್ದು ಎನ್ನಲಾಗಿತ್ತು. ಅರ್ಜುನ್ ಶೀಘ್ರದಲ್ಲೇ ಪತ್ನಿಗೆ ವಿಚ್ಛೇದನ ನೀಡಲಿದ್ದಾನೆ ಎಂದು ಹೇಳಲಾಗಿತ್ತು. ಆದರೆ ಅರ್ಜುನ್ ಮತ್ತು ಆತನ ಪತ್ನಿ ಮೆಹರ್ ರಾಮ್‌ಪಾಲ್ ಈ ಸುದ್ದಿಯನ್ನು ನಿರಾಕರಿಸಿದ್ದರು.

ಸದ್ಯಕ್ಕೆ ಹೃತಿಕ್ ಹೆಸರು ಸಹ 'ಕ್ವೀನ್' ಕಂಗನಾ ರನೌತ್ ಜೊತೆ ಕೇಳಿಬರುತ್ತಿದೆ.

## ರಜನಿಗೆ ಟಿಪ್ಪು ಕಂಟಕ!



ಮೈಸೂರಿನ ಅರಸ ಟಿಪ್ಪು ಸುಲ್ತಾನ್ ಜೀವನಚರಿತ್ರೆಯ ಸಿನಿಮಾದಲ್ಲಿ ರಜನಿಕಾಂತ್ ನಟಿಸುವ ವಿಚಾರಕ್ಕೆ ಕೆಲವು ಸಂಘಟನೆಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಕನ್ನಡದ ಉದ್ಯಮಿ ಅಶೋಕ್ ಖೇಣಿ, ಟಿಪ್ಪು ಬದುಕನ್ನು ಸಿನಿಮಾ ರೂಪಕ್ಕಿಳಿಸುವ ಸಾಹಸಕ್ಕೆ ಬಂಡವಾಳ ಹೂಡಲು ಮುಂದಾಗಿದ್ದರು. ಆದರೆ ಅದರಲ್ಲಿ ರಜನಿ ನಟಿಸುವುದನ್ನು ಕೆಲವು ಸಂಘಟನೆಗಳು ಮತ್ತು ತಮಿಳುನಾಡಿನ ಬಿಜೆಪಿ ಮುಖಂಡರು ವಿರೋಧಿಸಿದ್ದಾರೆ. ಈ ಸಿನಿಮಾ ಒಪ್ಪಿಕೊಳ್ಳದಂತೆ ಅವರು ಎಚ್ಚರಿಕೆಯನ್ನೂ ನೀಡಿದ್ದಾರೆ. ಟಿಪ್ಪು ತಮಿಳು ವಿರೋಧಿಯಾಗಿದ್ದ ಎನ್ನುವುದು ಈ ವಿರೋಧದ ಕಾರಣಗಳಲ್ಲಿ ಒಂದು. ಟಿಪ್ಪು ಒಬ್ಬ ಸರ್ವಾಧಿಕಾರಿ, ಕೊಲೆಗಡುಕ. ಟಿಪ್ಪುವನ್ನು ಹೀರೊ ಎಂಬಂತೆ ಪ್ರತಿಬಿಂಬಿಸುವುದು ಇತಿಹಾಸಕ್ಕೆ ಎಸಗುವ ಅಪಚಾರ ಎನ್ನುವುದು ವಿರೋಧಿಗಳ ವಾದ.

ಅನಾರೋಗ್ಯಕ್ಕೆ ಒಳಗಾಗಿದ್ದ ರಜನಿ ಈಗಷ್ಟೇ ಚೇತರಿಸಿಕೊಳ್ಳುತ್ತಿದ್ದಾರೆ. 'ಐತಿಹಾಸಿಕ ಸಿನಿಮಾ ಮಾಡುವ ಉದ್ದೇಶದಿಂದ ಶಿವಾಜಿ ಸೇರಿದಂತೆ ಹಲವು ರಾಜರ ಚರಿತ್ರೆಯನ್ನು ನೋಡಿದೆವು. ಚರಿತ್ರೆಯಲ್ಲಿ ದಾಖಲಾದ ಈ ಅರಸರ ಕಥನಗಳೆಲ್ಲವೂ ಹಿಂದೂ ಮತ್ತು ಮುಸ್ಲಿಮರ ಸಂಘರ್ಷಗಳನ್ನೇ ಹೆಚ್ಚು ಒಳಗೊಂಡಿವೆ. ಒಂದರಲ್ಲಿ ಮುಸ್ಲಿಂ ರಾಜ ಹಿಂದೂ ರಾಜನ ವಿರುದ್ಧ ಯುದ್ಧ ಮಾಡಿದರೆ, ಮತ್ತೊಂದರಲ್ಲಿ ಹಿಂದೂ ರಾಜ ಮುಸ್ಲಿಂ ರಾಜನ ವಿರುದ್ಧ ಯುದ್ಧ ಮಾಡಿರುತ್ತಾನೆ. ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಸಿಗುವುದು ಹಿಂದೂ ಮತ್ತು ಮುಸ್ಲಿಮರು ಇಬ್ಬರಿಂದಲೂ ಬೆಂಬಲ ಪಡೆದು ವಿದೇಶಿಯರ ವಿರುದ್ಧ ಹೋರಾಡಿದ ಟಿಪ್ಪು ಮಾತ್ರ. ಹೀಗಾಗಿ ಟಿಪ್ಪು ಕುರಿತು ಸಿನಿಮಾ ಮಾಡಲು ಹೊರಟೆ. ಅದಕ್ಕೆ ರಜನಿಕಾಂತ್ ಅವರಿಗಿಂತ ಬೇರೊಬ್ಬ ನಟ ಜೀವ ತುಂಬಲಾರ ಎಂದೆನಿಸಿತು' ಎಂದು ಅಶೋಕ್ ಖೇಣಿ ಹೇಳಿದ್ದಾರೆ.

ಸದ್ಯಕ್ಕೆ 'ಕಬಾಲಿ' ಸಿನಿಮಾ ಚಿತ್ರೀಕರಣದಲ್ಲಿ ಬಿಜಿಯಾಗಿರುವ ರಜನಿ ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

■ ಅಮಿ